<u>ಓ.ಎಸ್. ನಂ.31/2018 ರಲ್ಲಿ</u>
ಪಿ.ಡಬ್ಲ್ಯೂ-1(ರಿಯಾಜ್ ಖಾನ್)

ದಿನಾಂಕ 20.12.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಬಿ.ಪಿ.ಆರ್., ವಕೀಲರಿಂದಃ-</u>

ದಾವಾ ಸ್ವತ್ತಿನ ಸರ್ವೇ ನಂಬರ್ ನೆನಪಿಲ್ಲ. ದಾವಾ ಸ್ವತ್ತು ಅವರಗೆರೆ ಗ್ರಾಮದಲ್ಲಿದೆ. ದಾವಾ ಸ್ವತ್ತು ಅವರಗೆರೆ ಗ್ರಾಮದ ಸರ್ವೇ ನಂ.37/2 ರ 2 ಎಕರೆ ಸ್ವತ್ತು ಎನ್ನುವುದು ನಿಜ. ನಾನೇ ಹಾಜರುಪಡಿಸಿರುವ ನಿಪಿ-2 ದಾಖಲೆಯ ಪ್ರಕಾರ 1 ಮತ್ತು 2ನೇ ಪ್ರತಿವಾದಿಗಳು ದಾವಾ ಸ್ವತ್ತನ್ನು ದಿನಾಂಕ 16.11.2005 ರಂದು ನಮ್ಮ ಕುಟುಂಬದ ಸದಸ್ಯರಿಂದ ಖರೀದಿಸಿದ್ದಾರೆ ಎನ್ನುವುದು ನಿಜ. ಸಾಕ್ಷಿಯು ಮುಂದುವರೆದು ಸದರಿ ದಿನದಂದು ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಪ್ರಕಾರ ನಮ್ಮ ಕುಟುಂಬದವರು 1 ಮತ್ತು 2ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು 2,80,000/- ರೂಗಳಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನಿಜ.

2. ನಿಪಿ-2 ಕ್ರಯಪತ್ರಕ್ಕೆ ನಾನು ಹಾಗೂ ಇತರ ವಾದಿಗಳು ಒಪ್ಪಿಗೆ ಸೂಚಿಸಿ, ನಿಪಿ-1 ರಂತೆ ದಿನಾಂಕ 23.02.2017 ರಂದು ಒಪ್ಪಿಗೆ ಪತ್ರವನ್ನು ಮಾಡಿಕೊಟ್ಟಿದ್ದೇವೆ ಎನ್ನುವುದು ನಿಜ. ನಿಪಿ-1 ರ ಒಪ್ಪಿಗೆ ಪತ್ರದ 2ನೇ ಪುಟದಲ್ಲಿ ಕಾಣಿಸಲಾದಂತೆ ಸದರಿ ದಾಖಲೆಯನ್ನು ಮಾಡಿಕೊಡುವಾಗ ಪ್ರತಿವಾದಿಗಳಿಂದ ನಾವು 4,50,000/- ರೂಗಳನ್ನು ಚೆಕ್ ಮೂಲಕ ಹಾಗೂ 4,50,000/- ರೂಗಳನ್ನು ಡಿ.ಡಿ ಮೂಲಕ ಪಡೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿದಾರರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.